# ಕವಿತೆಯನ್ನು ಕುರಿತು ಒಂದಿಷ್ಟು

ಬದುಕಿಗೆ ಕಾವ್ಯದ ಆಶ್ರಯ ಬೇಕು. ಪರೋಕ್ಷವಾಗಿಯಾದರೂ ಎಲ್ಲರೂ ಅದರಿಂದ ಆನಂದ ಅಥವಾ ಸಾಂತ್ವನ ಪಡೆದುಕೊಂಡವರಾಗಿರುತ್ತಾರೆ. ನೇರವಾಗಿ ತೊಡಗಿಕೊಳ್ಳುವ ಕಾವ್ಯಾಶ್ರಯಿಗಳಲ್ಲಿ ಎರಡು ಬಗೆ. ತೀವ್ರವಾದ ಬದುಕನ್ನು ಬದುಕಿ ಅಭಿವ್ಯಕ್ತಿಸಲು ಕಾವ್ಯಕ್ಕೆ ಮೊರೆ ಹೋಗುವವರು. ತೀವ್ರವಾಗಿ ಬದುಕಲು ಹವಣಿಸಿ ಕಾವ್ಯಕ್ಕೆ ಮೊರೆ ಹೋಗುವವರು. ಕಾವ್ಯ ಮನುಷ್ಯನಷ್ಟೆ ಹಳೆಯದು. **Poetry of the earth is never dead** ಎಂಬ ಕೀಟ್ಸ್ ನ ಪ್ರಖ್ಯಾತ ಮಾತಿದೆ. ಅಕ್ಷರ ಹುಟ್ಟುವುದಕ್ಕೂ ಮೊದಲು ಕಾವ್ಯ ಹುಟ್ಟಿದೆ. ಅಕ್ಷರ ಕೇವಲ ಅದರ ಉಡುಗೆಯಷ್ಟೆ. ಜನಪದರ ಕಾವ್ಯ ಮೌಖಿಕವಾಗಿತ್ತು. ಅದು ಬಾಯಿಂದ ಬಾಯಿಗೆ ಹರಡುವಾಗ ಹೊಸ ಶಬ್ದಗಳು ಮೈನೆರೆಯುತ್ತಿದ್ದವು. ನನ್ನ ತಾಯಿ ರೂಪಕ ಭಾಷೆಯಲ್ಲಿಯೆ ಮಾತಾಡುತ್ತಿದ್ದಳು. ಅಷ್ಟೇನೂ ಶಿಕ್ಷಣ ಪಡೆಯದಿದ್ದ ಆಕೆಯ ಪದಸಂಪತ್ತು ನನ್ನನ್ನು ಬೆರಗುಗೊಳಿಸುತ್ತಿತ್ತು. ಒಮ್ಮೆ ಅಪ್ಪನಿಂದ ಏನನ್ನೊ ಬಚ್ಚಿಡಲು ಸಹಾಯಕ್ಕಾಗಿ ಯತ್ನಿಸಿದ್ದೆ. ಅದಕ್ಕೆ ತಕ್ಷಣ ಆಕೆ 'ಕದ್ ಮದ್ವೆ ಆಯ್ತಿನಿ ಸದ್ದಿಲ್ದೆ ವಾಲ್ಗ ಊದು ಅಂದಂಗಾಯ್ತು' ಎಂದಳು. ನಾನು ಒಮ್ಮೆಲೆ ಚಕಿತನಾದೆ. ಕದ್ದು ಆಗುವ ಮದುವೆ ಸರಿ, ಆದರೆ ಸದ್ದಿಲ್ಲದೆ ವಾಲಗ ಊದಲು ಸಾಧ್ಯವೆ? ಹೃದಯವನ್ನು, ಬುದ್ಧಿಯನ್ನು ಏಕಕಾಲದಲ್ಲಿ ರೋಮಾಂಚನಗೊಳಿಸುವ ಶಕ್ತಿ ಈ ವಕ್ರೋಕ್ತಿಗಿದೆ. ಆದ್ದರಿಂದಲೇ ಅದು ಆಪ್ಯಾಯಮನ, ಮನಕ್ಕೆ ಅಮೃತಪಾನ.

ಈ ವಿದ್ಯುನ್ಮಾನ ಯುಗದಲ್ಲೂ ನಮ್ಮ ಯುವ ಜನತೆಯಲ್ಲಿ ಕಾವ್ಯಪ್ರಜ್ಞೆ ಜಾಗೃತವಾಗಿರುವುದು ಹೆಮ್ಮೆಯೆನಿಸುತ್ತದೆ. ಪುಂಖಾನುಪುಂಖವಾಗಿ ಕಾವ್ಯ ಸಂಕಲನಗಳು ಹೊರಬರುತ್ತಿವೆ. ಅವುಗಳ ಗುಣಮಟ್ಟವನ್ನು ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಲ್ಲ. ಕಾವ್ಯದ ಆಕರ್ಷಣೆ ಎಲ್ಲ ಕಾಲದಲ್ಲಿಯೂ ಇದೆ. ಅದು ನಿರಂತರ ಆಗುವ ಕ್ರಿಯೆ. ಅದೊಂದು ವಿಸ್ಮಯ. ನನಗನ್ನಿಸುವಂತೆ ಕವಿತೆಯೆಂದರೆ ನಾಳಿನ ವಿಸ್ಮಯವನ್ನು ಇಂದು ನೋಡುವ ಬಗೆ. ಕಾಲದ ಹರಿವಿನಲ್ಲಿ ಕಾವ್ಯದ ಪಾತ್ರವೂ ಬದಲಾಗುತ್ತಾ ಸಾಗುತ್ತಿರುತ್ತದೆ. ಕಾಲವು ವೇಗವನ್ನು ಪಡೆದುಕೊಂಡಿದೆ.. ಕಾವ್ಯವೂ ಅಷ್ಟೆ, ಕಾಲದ ಅಗತ್ಯಕ್ಕನುಗುಣವಾಗಿ ಇ-ಮೇಲ್, ಫೇಸ್ಬುಕ್, ಟ್ವಿಟರ್‌ಗಳ ಮೂಲಕ ನಿಮಿಷಾರ್ಧದಲ್ಲಿ ಗುರಿ ಓದುಗರನ್ನು ತಲುಪುತ್ತಿದೆ. ಓದುಗರು ಎಂತಹ ಕಾವ್ಯವನ್ನು ಬಯಸುತ್ತಾರೆ ಎಂಬುದನ್ನು ತನ್ನ ಅಗತ್ಯಗಳಿಗೆ ಪೂರಕವಾಗಿ ಕಾಲವೇ ನಿರ್ಧರಿಸುತ್ತದೆ. ಎಂತಹ ಕಾವ್ಯ ಉಳಿಯುತ್ತದೆ, ಹೇಗೆ ಉಳಿಯುತ್ತದೆ ಎನ್ನುವುದನ್ನು ಖಲೀಲ್ ಗಿಬ್ರಾನ್ ಹೇಳಿದ ಈ ಕಥೆ ಸೊಗಸಾಗಿ ನಿರೂಪಿಸುತ್ತದೆ:

ಅನೇಕ ಶತಮಾನಗಳ ಹಿಂದೆ ಅಥೆನ್ಸಿನ ದಾರಿಯಲ್ಲಿ ಇಬ್ಬರು ಕವಿಗಳು ಭೇಟಿಯಾದರು. ಒಬ್ಬರನ್ನು ನೋಡಿ ಒಬ್ಬರಿಗೆ ಸಂತೋಷವಾಯಿತು.

ಒಬ್ಬ ಕವಿ ಮತ್ತೊಬ್ಬನನ್ನು ಕೇಳಿದ; 'ಏನಯ್ಯಾ, ಈಚೆಗೆ ಏನು ಬರೆದಿದ್ದೀಯ? ಅದು ನಿನ್ನ ತಂತೀ ವಾದ್ಯದೊಂದಿಗೆ ಹೇಗೆ ಹೊಂದಿಕೊಳ್ಳುತ್ತದೆ?'

ಇನ್ನೊಬ್ಬ ಕವಿ ಹೆಮ್ಮೆಯಿಂದ ಉತ್ತರ ಕೊಟ್ಟ: 'ನಾನು ಈಗ ತಾನೆ ನನ್ನ ಕಾವ್ಯಗಳಲ್ಲಿ ಅತ್ಯಂತ ಮಹಾಕಾವ್ಯವನ್ನು, ಬಹುಶಃ ಗ್ರೀಕ್‌ನಲ್ಲಿ ರಚಿತವಾದ ಕಾವ್ಯಗಳಲ್ಲೆಲ್ಲಾ ಮಹತ್ತಾದುದನ್ನು ಬರೆದು ಮುಗಿಸಿದ್ದೇನೆ. ಜ್ಯೂಸ್ ದೇವತೆಯ ಪ್ರಾರ್ಥನೆ ಅದು'.

ಹೀಗೆಂದು ಹೇಳಿ ತನ್ನ ಮೇಲಂಗಿಯ ಜೇಬಿನಿಂದ ಚರ್ಮ ಕಾಗದವನ್ನು ತೆಗೆಯುತ್ತಾ ಹೇಳಿದ 'ನೋಡಿಲ್ಲಿ, ಅದು ಇಲ್ಲಿದೆ. ನಾನು ಸಂತೋಷದಿಂದ ನಿನಗೆ ಓದಿ ಹೇಳುತ್ತೇನೆ. ಬಾ, ಆ ಬಿಳೀ ಸೈಪ್ರಸ್ ಮರದ ನೆರಳಿನಲ್ಲಿ ಕುಳಿತುಕೊಳ್ಳೋಣ'.

ಕವಿ ತನ್ನ ಕಾವ್ಯ ವನ್ನು ಓದಿದ. ಅದು ದೀರ್ಘಕಾವ್ಯ.

ತನ್ನ ದಯಾಸ್ವಭಾವದಿಂದ ಮತ್ತೊಬ್ಬ ಕವಿ ಹೇಳಿದ: 'ಇದೊಂದು ಹಿರಿಯ ಕಾವ್ಯ. ಇದು ಯುಗ ಯುಗಗಳು ಬಾಳುತ್ತದೆ, ಆ ಮೂಲಕ ನಿನಗೂ ಕೀರ್ತಿ ಬರುತ್ತದೆ'.

ಈಗ ಮೊದಲ ಕವಿ ಶಾಂತವಾಗಿ ಹೇಳಿದ; 'ಈಚೆಗೆ ನೀನು ಏನು ಬರೆಯುತ್ತಿದ್ದೀಯೆ'?

ಮತ್ತೊಬ್ಬ ಉತ್ತರ ಕೊಟ್ಟ: 'ಎಲ್ಲೋ ಸ್ವಲ್ಪ. ತೋಟದಲ್ಲಿ ಆಡುತ್ತಿರುವ ಮಗುವನ್ನು ಕುರಿತು ಎಂಟು ಪಂಕ್ತಿಗಳು.' ಅವನು ತನ್ನ ಪಂಕ್ತಿಗಳನ್ನು ಹೇಳಿದ. ಮೊದಲ ಕವಿ ಹೇಳಿದ: 'ಪರವಾಗಿಲ್ಲ, ಪರವಾಗಿಲ್ಲ'. ಅವರು ಅಗಲಿದರು.

ಈಗ ಎರಡು ಸಾವಿರ ವರ್ಷಗಳಾದ ಮೇಲೆ ಆ ಎಂಟು ಪಂಕ್ತಿಗಳನ್ನು ಎಲ್ಲ ಭಾಷೆಗಳಲ್ಲೂ ಓದುತ್ತಾರೆ, ಇಷ್ಟಪಡುತ್ತಾರೆ, ನೆನೆಯುತ್ತಾರೆ.

ಮತ್ತೊಂದು ಕಾವ್ಯವೂ ಯುಗಗಳನ್ನು ದಾಟಿ ಪುಸ್ತಕ ಭಂಡಾರಗಳಲ್ಲೂ, ವಿದ್ವಾಂಸರ ಕಿರುಕೋಣೆಗಳಲ್ಲೂ ಉಳಿದು ಬಂದಿದ್ದರೂ, ಅದನ್ನು ಎಲ್ಲರೂ ಜ್ಞಾಪಿಸಿಕೊಳ್ಳುತ್ತಿದ್ದರೂ ಅದನ್ನು ಯಾರೂ ಪ್ರೀತಿಸುವುದೂ ಇಲ್ಲ, ಓದುವುದೂ ಇಲ್ಲ.

■ ಮೂಚಿ

## ಮಾತೇ ಮುತ್ತು

★ ಒಳಗೊಂದು ಬೇರೆ ಆಕಾರ,
ತಿಳಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ,
ದಳಗಳೊಂಬತ್ತು ಚಕ್ರ ಸುಳಿವ ಸೂತ್ರಾಧಾರ
ಲಾಳಿ ಮೂರು ಕೊಳವಿಯೊಳು ಎಳೆ
ತುಂಬುತದರೊಳು.

-ಶಿಶುನಾಳ ಷರೀಫ

★ ಕೆಲವು ಮಹಿಳೆಯರು ಗಂಡನ್ನು ಹಿಂಬಾಲಿಸುತ್ತಾರೆ, ಇನ್ನು ಕೆಲವು ಮಹಿಳೆಯರು ಅವರ ಕನಸುಗಳನ್ನು ಹಿಂಬಾಲಿಸುತ್ತಾರೆ. ಎತ್ತ ಹೋಗಬೇಕು ಎನ್ನುವ ಗೊಂದಲವಿದೆಯೆ? ನಿಮ್ಮ ವೃತ್ತಿಜೀವನ ಯಾವತ್ತೂ ನಿಮ್ಮನ್ನು ಪ್ರೀತಿಸಲಾರೆ ಎಂದು ಹೇಳುವುದಿಲ್ಲ ಎನ್ನುವುದನ್ನು ನೆನಪಿಡಿ.

-ಖ್ಯಾತ ಗಾಯಕಿ ಲೇಡಿ ಗಾಗಾ

★ ಶ್ರೇಷ್ಠ ಸಂಪತ್ತು ಸಂಗೀತಗೋಷ್ಠಿಯ ಜನಸಾಗರದಂತೆ ಒಟ್ಟುಗೂಡುತ್ತದೆ ಮತ್ತು ಕರಗುತ್ತದೆ.

-ತಿರುವಳ್ಳುವರ್

★ ನಕ್ಷತ್ರಗಳು ಬೆಂಕಿ ಉಗುಳುತ್ತವೆ ಎನ್ನುವುದನ್ನು ಅನುಮಾನಿಸಬಲ್ಲೆ; ಸೂರ್ಯ ಚಲಿಸುತ್ತಾನೆ ಎನ್ನುವುದನ್ನು ಅನುಮಾನಿಸಬಲ್ಲೆ; ಸತ್ಯ ಸುಳ್ಳಾಗಿರಬಹುದು ಎಂದೂ ಅನುಮಾನಿಸುವೆ. ಆದರೆ ನನ್ನ ಪ್ರೀತಿಯನ್ನೆಂದೂ ಅನುಮಾನಿಸಲಾರೆ.

-ವಿಲಿಯಂ ಷೇಕ್ಸ್‌ಪಿಯರ್

★ ಮನುಷ್ಯತ್ವದಲ್ಲಿ ನಂಬಿಕೆ ಕಳೆದುಕೊಳ್ಳಬೇಡಿ. ಅದು ಸಮುದ್ರವಿದ್ದಂತೆ. ಸಮುದ್ರದಲ್ಲಿ ಕೆಲವು ಹನಿ ನೀರು ಕಲುಷಿತಗೊಂಡರೆ ಇಡೀ ಸಮುದ್ರ ಕಲುಷಿತಗೊಳ್ಳುವುದಿಲ್ಲ.

-ಮಹಾತ್ಮ ಗಾಂಧೀಜಿ

★ ವೈಫಲ್ಯ ಎನ್ನುವುದು ಆ ಕೆಲಸವನ್ನು ಮತ್ತೆ ಇನ್ನಷ್ಟು ಬುದ್ಧಿವಂತಿಕೆಯಿಂದ ಆರಂಭಿಸಲು ಸಿಗುವ ಒಳ್ಳೆಯ ಅವಕಾಶ.

-ಹೆನ್ರಿ ಫೋರ್ಡ್

★ ಹೃದಯ ಇರುವುದೇ ಭಗ್ನಗೊಳ್ಳಲು.

-ಆಸ್ಕರ್ ವೈಲ್ಡ್

★ ಮಮತೆ ತುಂಬಿದ ಶಬ್ದಗಳು ಸಣ್ಣವೂ, ಆಡಲು ಸುಲಭವೂ ಇರುತ್ತವೆ; ಆದರೆ ಅವುಗಳ ಪರಿಣಾಮ ಸುದೀರ್ಘವಾಗಿರುತ್ತದೆ.

-ಮದರ್ ತೆರೇಸಾ

★ ಇತಿಹಾಸದಲ್ಲಿ ಯಾವತ್ತೂ ನೈಜ ಬದಲಾವಣೆಗಳು ಕೇವಲ ಚರ್ಚೆಯಿಂದ ಆಗಿಲ್ಲ.

-ನೇತಾಜಿ ಸುಭಾಶ್‌ಚಂದ್ರ ಬೋಸ್

★ ಹಣ ಸ್ವರ್ಗದಿಂದ ಬರುವುದಿಲ್ಲ; ಅದನ್ನು ಭೂಮಿಯ ಮೇಲೆಯೇ ಸಂಪಾದಿಸಬೇಕು.

-ಮಾರ್ಗರೆಟ್ ಥ್ಯಾಚರ್

★ ಅತ್ಯುನ್ನತ ಮಟ್ಟದ ಶಿಕ್ಷಣ ನಮಗೆ ಕೇವಲ ಮಾಹಿತಿಗಳನ್ನು ಒದಗಿಸುವುದಿಲ್ಲ. ಅಸ್ತಿತ್ವದಲ್ಲಿರುವ ಎಲ್ಲದರ ಜತೆ ಸೌಹಾರ್ದದಿಂದ ಬದುಕುವುದನ್ನೂ ಕಲಿಸುತ್ತದೆ.

-ರವೀಂದ್ರನಾಥ ಠಾಗೋರ್